**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು**

**ಸಿ.ಸಿ.3049/2021**

**ಫಿರ್ಯಾದಿಃ** ರಾಜ್ಯದ ಪರವಾಗಿ ಬಿಳಿಗೆರೆ ಪೊಲೀಸ್ ಠಾಣೆ,

**ವಿರುದ್ಧ**

**ಆರೋಪಿಃ** ರಂಗಸ್ವಾಮಿ ಬಿನ್ ಲೇ.ಸಿದ್ದನಾಯಕ, 58 ವರ್ಷ,
ಮಲ್ಲೂಪುರ ಗ್ರಾಮ, ನಂಜನಗೂಡು ತಾ.

**ದೋಷಾರೋಪಣೆ**

ಶ್ರೀ ಕಿಶೋರ್ ಕುಮಾರ್ ಎಂ., 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ :-

ದಿನಾಂಕ 08.08.2021 ರಂದು ಬೆಳಗ್ಗೆ 11.00 ಗಂಟೆ ಸಮಯದಲ್ಲಿ ಬಿಳಿಗೆರೆ ಪೋಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಮಲ್ಲುಪುರ ಗ್ರಾಮದ ಬಸ್ ನಿಲ್ದಾಣದ ಪಕ್ಕ ಸಾರ್ವಜನಿಕ ಸ್ಥಳದಲ್ಲಿ ಆರೋಪಿಯಾದ ನೀವು ಅಕ್ರಮವಾಗಿ ಯಾವುದೇ ಪರವಾನಗಿ ಇಲ್ಲದೆ ಒಟ್ಟು ರೂ1,370/- 85 ಪೈಸೆ ಬೆಲೆಬಾಳುವ ಒಟ್ಟು 3,510 ಮಿ.ಲೀ ಮದ್ಯ ಇರುವ 90 ಎಂ ಎಲ್ ನ 39 ಹೈವಾರ್ಡ್ಸ್ ಚೀರ್ಸ್ ವಿಸ್ಕಿ ಪೌಚುಗಳನ್ನು ಅಕ್ರಮವಾಗಿ ತಮ್ಮ ಸ್ವಾಧೀನದಲ್ಲಿ ಇಟ್ಟುಕೊಂಡಿರುತ್ತೀರಿ, ಆದ್ದರಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರೆಂದು ಈ ಮೂಲಕ ಆಪಾದಿಸುತ್ತೇನೆ.

ಕೊನೆಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ವೇಳೆಯಲ್ಲಿ ಆರೋಪಿತರಾದ ನೀವು ಅಕ್ರಮವಾಗಿ 90 ಎಂ ಎಲ್ ನ 39 ಹೈವಾರ್ಡ್ಸ್ ಚೀರ್ಸ್ ವಿಸ್ಕಿ ಟೆಟ್ರಾ ಪ್ಯಾಕೇಟ್ ಮದ್ಯವನ್ನು ವಿಧಿ ವಿರುದ್ಧವಾಗಿ ತಮ್ಮ ಸ್ವಾಧೀನದಲ್ಲಿಟ್ಟುಕೊಂಡಿರುತ್ತೀರಿ, ಆದ್ದರಿಂದ ಕರ್ನಾಟಕ ಅಬಕಾರಿ ಕಾಯಿದೆ ಅಧಿನಿಯಮ ಕಲಂ.34ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರೆಂದು ನಿಮ್ಮ ಮೇಲೆ ಈ ಮೂಲಕ ಆಪಾದಿಸುತ್ತೇನೆ.

ಮೇಲ್ಕಂಡ ಆಪಾದನೆಗಳನ್ನು ಆರೋಪಿತರಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕಃ 07.11.2023 — 1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ಸ್ಥಳ : ನಂಜನಗೂಡು — ನಂಜನಗೂಡು

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ , ನಂಜನಗೂಡು**

**<u>ಸಿ.ಸಿ.3049/2021</u>**

**ಫಿರ್ಯಾದಿಃ** ರಾಜ್ಯದ ಪರವಾಗಿ ಬಿಳಿಗೆರೆ ಪೊಲೀಸ್ ಠಾಣೆ,

**ವಿರುದ್ಧ**

**ಆರೋಪಿಃ** ರಂಗಸ್ವಾಮಿ ಬಿನ್ ಲೇ.ಸಿದ್ದನಾಯಕ, 58 ವರ್ಷ,
ಮಲ್ಲೂಪುರ ಗ್ರಾಮ, ನಂಜನಗೂಡು ತಾ.

*: ಆಪಾದನೆ :*

*ಪ್ರಶ್ನೆ:1 : ಮೇಲ್ಕಂಡ ದೋಷಾರೋಪಣೆ ಓದಿ ಹೇಳಿದ್ದು ನಿನಗೆ ಅರ್ಥವಾಯಿತೆ?*

*ಉತ್ತರ :*

*ಪ್ರಶ್ನೆ:2 : ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?*

*ಉತ್ತರ :*

*ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ತೆರೆದ ನ್ಯಾಯಾಲಯದಲ್ಲಿ ದಿನಾಂಕ 07.11.2023 ರಂದು ದೃಢೀಕರಿಸಿದ್ದೇನೆ.*

*1ನೇ ಹೆ.ಸಿ.ಜೆ ಮತ್ತು ಜೆಎಂಎಫ್‌ಸಿ*

*ನಂಜನಗೂಡು*